ಬದಿಗೆ ಸರಿಯಿತು ಮತ್ತು ಹೊಡೆದಾಟದ ವಿಷಯ ಪ್ರಮುಖವಾಯಿತು. ಆ ಹೊಡೆದಾಟದ ಘಟನೆಯೇ ಪ್ರಮುಖವಾಗಿ ಅದರ ಬಗ್ಗೆ ರಾಜಿ ಪಂಚಾಯಿತಿ ನಡೆಯಿತು. ಜಮಾತ್‌ನ ಕೆಲವು ಸದಸ್ಯರೇನೊ ಖಲಂದರ್ ಪರವಾಗಿ ನಿಂತರು. ಆ ಏರಿಯಾದ ಕೌನ್ಸಿಲರ್‌ನನ್ನು ಕಂಡು ಪೊಲೀಸರ ಮೇಲೆ ಪ್ರಭಾವ ಬೀರಿ ಸಾಕಷ್ಟು ಹಣವನ್ನು ಖರ್ಚು ಮಾಡಿ ಎಫ್‌ಐಆರ್ ಆಗದಂತೆ ವಶೀಲಿ ಬಾಜಿ ಮಾಡಿ ಕೊನೆಗು ಖಲಂದರ್‌ನೇ, ''ಮಾಫ್ ಕರೋ ಭಾಯಿ'' ಅನ್ನಬೇಕಾಯಿತು. ಆ ಸಭೆಯಲ್ಲಿ ನೂರ್ ಫಾತಿಮಾಳ ಬಗ್ಗೆ ವಿಷಯ ಪ್ರಸ್ತಾಪ ಮಾಡಲು ಕೂಡ ಜನ ಇಲ್ಲದಂತಾಯಿತು.

ವಿಷಯ ಅಷ್ಟಕ್ಕೇ ಮುಗಿಯಲಿಲ್ಲ. ಹೊಡೆದಾಟದ ಘಟನೆಯ ಸುದ್ದಿ ಅವನ ಮನೆಯಲ್ಲಿಯೂ ಪ್ರತಿಫಲಿಸಿತ್ತು. ಅವನ ಮಗ ಅಮ್ಜದ್‌ಗೆ ತನ್ನ ಅಪ್ಪ ಮನೆ ಮರ್ಯಾದೆ ಕಳೆದ ಎಂದು ಅಸಮಾಧಾನ ಮೂಡಿತ್ತು. ಮರ್ಯಾದೆಯ ಪ್ರಶ್ನೆ ಬಂದಾಗ ಖಲಂದರ್‌ಗೆ ಸಿಟ್ಟು ನೆತ್ತಿಗೇರಿತ್ತು. ಮನೆಯ ಹೆಂಗಸರು ಮತ್ತು ಮಕ್ಕಳು ಮಾತ್ರ ಮರ್ಯಾದೆಯನ್ನು ಜೋಪಾನವಾಗಿ ಕಾಪಾಡಬೇಕು. ತಾನು ಮಾತ್ರ ನ್ಯಾಯದ ಸಲುವಾಗಿ ಹೋರಾಟ ಮಾಡಿರುವುದರಿಂದ ಮಗನ ತರ್ಕ ತನಗೆ ಅನ್ವಯವಾಗುವುದಿಲ್ಲ ಎಂಬ ಧೋರಣೆ ಅವನದಾಗಿತ್ತು. ತಾನೇನು ಯಾವಳನ್ನಾದರೂ ಓಡಿಸಿಕೊಂಡು ಹೋಗಿದ್ದೇನೆಯೇ? ಯಾರ ಮನೆಯನ್ನಾದರೂ ಹಾಳು ಮಾಡಿದ್ದೇನೆಯೇ? ಹೋಗಲಿ ಅಂದರೆ ನೂರ್ ಫಾತಿಮಳ ಮದುವೆಗೆ ಹೋಗಿ ತಾನೇನಾದರೂ ಒಂದಗುಳು ಅನ್ನ ಬಾಯಿಗೆ ಹಾಕಿದ್ದೇನೆಯೆ? ಈ ನನ್ನ ಮಗನನ್ನ... ಎಂದು ಕಿಡಿಕಾರಿದ ಖಲಂದರ್. ಆದರೆ, ಅಮ್ಜದ್ ಬಿಡಬೇಕಲ್ಲ... ''ಇಲ್ಲದ ಉಸಾಬರಿ ನಿಮಗೆ ಯಾಕೆ ಬೇಕು?'' ಎಂದು ಅಪ್ಪನ ಎದುರಿಗೆ ವಾದಿಸಿದ್ದೂ ಅಲ್ಲದೆ ಅಮ್ಮನಿಗೆ ಬೇರೆ ಹಚ್ಚಿ ಕೊಟ್ಟಿದ್ದ. ಆಕೆ ಅಪ್ಪ–ಮಗನ ನಡುವೆ ರಾಜಿ ಸಂಧಾನ ಮಾಡಲು ಹೆಣಗಾಡಿ ಕೊನೆಗೆ ಕಣ್ಣೀರು ಹಾಕಿ ಸೆರಗಿನಿಂದ ಕಣ್ಣು ಮತ್ತು ಮೂಗನ್ನು ಒರೆಸಿಕೊಂಡಳು. ಇಷ್ಟೆಲ್ಲಾ ನಡೆದ ಅನಂತರ ಅಪ್ಪ ಮಗ ಗೆರೆಗಳನ್ನು ಎಳೆದು ತಮ್ಮ ತಮ್ಮ ವ್ಯಾಪ್ತಿಯನ್ನು ಗುರುತಿಸಿಕೊಂಡು ತಣ್ಣಗಾದರು. ಮನೆಯ ಮರ್ಯಾದೆಯ ವಿಷಯವಾಗಿ ಇಂದಿಗೂ ತಾನು ಉತ್ತರದಾಯಿ ಎಂಬ ಹೊಸ ವಿಷಯವನ್ನು ಅರಿತುಕೊಂಡವನಂತೆ ಖಲಂದರ್ ಕೆಲ ದಿವಸಗಳ ಕಾಲ ಯಾವುದೇ ವ್ಯವಹಾರಕ್ಕೂ ತಲೆ ಹಾಕದಿದ್ದರೂ ನೂರ್ ಫಾತಿಮಾ ಮತ್ತು ನಾಸೀರ್ ಆಗಾಗ್ಗೆ ಅವನ ಎದೆಯ ಕದ ಬಡಿದು ಅವನ ಮನೋಲೋಕವನ್ನು ಅಸ್ತವ್ಯಸ್ತಗೊಳಿಸುತ್ತಿದ್ದರು. ಸ್ವರ್ಗಸ್ಥನಾದ ನಾಸಿರ್‌ನ ಕುಟುಂಬದ ಬಗ್ಗೆ ತಾನೇನೂ ನೆರವಾಗಲು ಸಾಧ್ಯವಾಗಲಿಲ್ಲವಲ್ಲ ಎಂಬ ಅತೃಪ್ತಿಯು ಅವನಲ್ಲಿ ಉಳಿದೇ ಹೋಯಿತು.

ಅವನ ಮನೋಲೋಕದ ಕೊಳ ಕದಡಿದಂತಹ ಹೊಯ್ದಾಟದ ನಡುವೆ ಅವನ ಕಣ್ಣು ತನ್ನ ಹಣ್ಣಿನ ಗಾಡಿಯಲ್ಲಿದ್ದ ಕಪ್ಪು ದ್ರಾಕ್ಷಿಯ ಗೊಂಚಲಿನಲ್ಲಿದ್ದ ಹಣ್ಣುಗಳ ಪೈಕಿ ಒಂದೇ ಒಂದು ದ್ರಾಕ್ಷಿಯ ಮೇಲೆ ಕೀಲಿಸಿತು. ನೋಡ ನೋಡುತ್ತಿದ್ದಂತೆಯೇ ಆ ಕಪ್ಪು ದ್ರಾಕ್ಷಿಯ ನಡುವಿನಿಂದ ಚಿನ್ನದ ಬಣ್ಣದ ಬಾಗಿಲು ತೆರೆಯಿತು ಮತ್ತು ಖಲಂದರ್‌ನನ್ನು ಅನಾಮತ್ತಾಗಿ ಒಳಗೆ ಸೆಳೆಯತೊಡಗಿತು. ಅವನು ತನ್ನೆಲ್ಲ ಶಕ್ತಿಯನ್ನು ಮೀರಿ ಹೋರಾಡಲು ಪ್ರಯತ್ನ ಪಟ್ಟಷ್ಟೂ ಅದರ ಸೆಳೆತ ತೀವ್ರವಾಗತೊಡಗಿತು. ಅಣುಅಣುವನ್ನು ಹೀರಿಕೊಳ್ಳುವ ವಾಕ್ಯೂಮ್ ಕ್ಲೀನರ್‌ನ ಅಗಾಧ ಶಕ್ತಿಗೆ ಶರಣಾದ ಅನಂತರ ತಬ್ಬಿಬ್ಬಾದ ಅವನು ಆ ರಸಧಾರೆಯಲ್ಲಿ ಮಿಂದು ನವೋಲ್ಲಾಸ ಮತ್ತು ಚೈತನ್ಯದಿಂದ ಕೂಡಿದವನಾದ. ಅಷ್ಟರಲ್ಲೇ ಅವನ ಬಟ್ಟೆಬರೆ ಮತ್ತು ಅವನ ಸಂಪೂರ್ಣ ಚಹರೆಯೇ ಬದಲಾಯಿತು. ವೈಭವದಿಂದ ಕೂಡಿದ ರಾಜೋಚಿತವಾದ ಉಡುಗೆ ತೊಡುಗೆಗಳಿಂದ ಅವನು ಕಂಗೊಳಿಸತೊಡಗಿದ. ದ್ರಾಕ್ಷಿಯ ಒಳಗಿದ್ದ ಬೀಜವು ವಿಸ್ತರಿಸುತ್ತಾ ಹೋಗಿ ಚಿನ್ನದ ಸಿಂಹಾಸನವಾಗಿ ಮಾರ್ಪಟ್ಟಿತು. ಭೋಪರಾಕ್‌ಗಳ ಎದೆಯುಬ್ಬಿಸುವ ಹುಮ್ಮಸ್ಸಿನಿಂದ ಕೂಡಿ ಮೆಲುವಾದ ಹೆಜ್ಜೆಗಳನ್ನು ಇಡುತ್ತಾ ಅವನು ಸಿಂಹಾಸನದ ಬಳಿ ಸಾರಿ ಆಸೀನನಾದ. ಚಾಮರಗಳು ಬೀಸತೊಡಗಿದವು. ಸದಾಕಾಲ ಅವನನ್ನು ಕಾಡಿಸುತ್ತಿದ್ದ ಸೆಕೆ